ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಖರೀದಿ ಮತ್ತು ಸಂಗ್ರಹ ವಿಭಾಗ
KARNATAK UNIVERSITY, DHARWAD
Stores and Purchase Section

ಪಾವಟೆನಗರ, ಧಾರವಾಡ-೫೮೦೦೦೩ Email: store.purchase@kud.ac.in

Ref No: ಕವಿವಿ/ಖರೀದಿ&ಸಂಗ್ರಹ/1038 ::ಸುತ್ತೋಲೆ:: ದಿನಾಂಕ: 15 JAN 2025

ವಿಷಯ: ಕರ್ನಾಟಕ ವಿಶ್ವವಿದ್ಯಾಲಯದ ದಿನಪತ್ರಿಕೆ ಪ್ರಕಟಣೆಗಳನ್ನು ಅಧೀಕೃತ ಏಜಂಟರ ಮೂಲಕ ವಾರ್ತಾ ಇಲಾಖೆಯಿಂದ ಪ್ರಕಟಿಸುವ ಕುರಿತಾಗಿ

ಉಲ್ಲೇಖ: 1. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 12/01/2025
2. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾಧಿಕಾರಿ ಕಛೇರಿ ಆವರಣ, ವಾರ್ತಾ ಭವನ, ಧಾರವಾಡ ಇವರಿಗೆ ಬರೆದ ಪತ್ರ 1037 ದಿನಾಂಕ: 13-01-2025

ಕರ್ನಾಟಕ ವಿಶ್ವವಿದ್ಯಾಲಯದ ದಿನಪತ್ರಿಕೆ ಪ್ರಕಟಣೆಗಳನ್ನು ಮುಂದಿನ ದಿನಗಳಲ್ಲಿ ಅಧೀಕೃತ ಏಜಂಟರ ಮೂಲಕ ದಿನಪತ್ರಿಕೆಗಳಲ್ಲಿ ವಾರ್ತಾ ಇಲಾಖೆಯಿಂದ ಹೊರಡಿಸಲಾಗುವುದು.

ಉಲ್ಲೇಖ-2 ರನ್ವಯ ಧಾರವಾಡದ ಎಲ್ಲ ಸರ್ಕಾರಿ ಕಚೇರಿಗಳು ತಮ್ಮ ಪ್ರಕಟಣೆಗಳನ್ನು ಸ್ಥಳೀಯ ವಾರ್ತಾ ಇಲಾಖೆಯ ಮೂಲಕ ಅಧಿಕೃತ ಏಜಂಟರಿಂದ ಜಾಹೀರಾತು ಪ್ರಕಟಣೆಗಾಗಿ ಪಾಲಿಸುತ್ತಿರುವ ನಿಯಮಗಳಂತೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಎಲ್ಲ ಜಾಹೀರಾತು ಪ್ರಕಟಣೆಗಳನ್ನು ನೇರವಾಗಿ ವಾರ್ತಾ ಇಲಾಖೆಯಲ್ಲಿ ಲಭ್ಯವಿರುವ ಸ್ಥಳೀಯ ಏಜಂಟರ ಮೂಲಕ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕಾಲಕಾಲಕ್ಕೆ ವಿಶ್ವವಿದ್ಯಾಲಯದಿಂದ ಕಳುಹಿಸುವ ಜಾಹೀರಾತುಗಳನ್ನು ಪ್ರಕಟಿಸಿ, ಬಿಲ್ಲುಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯವರು ತಿಳಿಸಿದಂತೆ, ಪ್ರಕಟಣೆಗಳನ್ನು ಮೂಲ ಪ್ರತಿಗಳನ್ನು ನೇರವಾಗಿ ಬಂದು ಕಚೇರಿ ವೇಳೆಯಲ್ಲಿ 4 ಗಂಟೆಯೊಳಗಾಗಿ ಸಲ್ಲಿಸಿದಲ್ಲಿ ಮರುದಿನ ದಿನಪತ್ರಿಕೆಯಲ್ಲಿ ಪ್ರಕಟವಾಗುತ್ತವೆ. ಕಾರಣ, ಖರೀದಿ ಮತ್ತು ಸಂಗ್ರಹ ವಿಭಾಗಕ್ಕೆ ಒಂದು ದಿನ ಮುಂಚಿತವಾಗಿ ಕಡತವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಇ-ಮೇಲ್ ಪ್ರತಿಯನ್ನು ವರ್ಡ್-ಫಾರ್ಮ್ಯಾಟ್‌ನಲ್ಲಿ ಒದಗಿಸಬೇಕಾಗುವುದು.

ಮುಂದುವರೆದು, ಟೆಂಡರ್ ಪ್ರಕಟಣೆಗಳನ್ನು ಪ್ರಕಟಿಸಲು ಸಲ್ಲಿಸುವುದಿದ್ದಲ್ಲಿ ಟೆಂಡರ್ ಮೌಲ್ಯವನ್ನು ಜರೂರಾಗಿ ತಿಳಿಸಬೇಕಾಗುತ್ತದೆ. ಟೆಂಡರ್ ಮೌಲ್ಯಗಳ ಅನುಗುಣವಾಗಿ ವಾರ್ತಾ ಇಲಾಖೆಯವರು ಸ್ಥಳೀಯ/ರಾಜ್ಯಮಟ್ಟದ/ರಾಷ್ಟ್ರಮಟ್ಟದ ದಿನಪತ್ರಿಕೆಗಳ ಆಯ್ಕೆಮಾಡಿ, ಸ್ಥಳೀಯ ಅಧೀಕೃತ ಏಜಂಟರ್ ಮೂಲಕ ಪ್ರಕಟಣೆ ಪ್ರಕಟಿಸುವುದಾಗಿ ತಿಳಿಸಿರುತ್ತಾರೆ.

ಆದ್ದರಿಂದ, ಈ ಸಂಬಂಧವಾಗಿ ಇನ್ನು ಮುಂದೆ, ಖರೀದಿ ಮತ್ತು ಸಂಗ್ರಹ ವಿಭಾಗ ಮುಖಾಂತರ ಸಲ್ಲಿಸುವ ತಮ್ಮ ವಿಭಾಗದ ಪ್ರಕಟಣೆಗಳನ್ನು ಆಡಳಿತಾತ್ಮಕ ಒಪ್ಪಿಗೆ ಪಡೆದು ಎಲ್ಲ ವಿಭಾಗದವರು ಕಟ್ಟುನಿಟ್ಟಾಗಿ ಕ್ರಮವನ್ನು ಪಾಲಿಸಬೇಕೆಂದು ಗಮನಕ್ಕೆ ತರಲಾಗಿದೆ.

A. Channam

ಕುಲಸಚಿವರು

ಗೆ,

1. ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಕುಲಸಚಿವರು (ಮೌ.ಮಾ.) ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
4. ಹಣಕಾಸು ಅಧಿಕಾರಿಗಳು, ಕವಿವಿ, ಧಾರವಾಡ.
5. ನಿರ್ದೇಶಕರು, ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ/ಇ-ಆಡಳಿತ, ಕವಿವಿ, ಧಾರವಾಡ.
6. ಮುಖ್ಯ ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ಕ.ವಿ.ವಿ. ಧಾರವಾಡ.
7. ಉಪ-ಕುಲಸಚಿವರು, ಖರೀದಿ ಮತ್ತು ಸಂಗ್ರಹ ವಿಭಾಗ, ಕ.ವಿ.ವಿ. ಧಾರವಾಡ.

ಪ್ರತಿ ಮಾಹಿತಿಗಾಗಿ

1. ಕುಲಪತಿಗಳ ಆಪ್ತಕಾರ್ಯದರ್ಶಿಗಳು, ಕವಿವಿ, ಧಾರವಾಡ.
2. ಕುಲಸಚಿವರ ಆಪ್ತಸಹಾಯಕರು, ಕವಿವಿ, ಧಾರವಾಡ.
3. ಸ್ಥಾನಿಕ ಅಭಿಯಂತರರು ಕವಿವಿ, ಧಾರವಾಡ.
4. ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು ಕವಿವಿ, ಧಾರವಾಡ.
5. ಆಡಳಿತಾಧಿಕಾರಿಗಳು: ಕವಿವಿ, ಸ್ನಾತಕೋತ್ತರ ಕೇಂದ್ರಗಳು: ಗದಗ/ಕಾರವಾರ
6. ಗ್ರಂಥಪಾಲಕರು : ಕವಿವಿ,ಗ್ರಂಥಾಲಯ /ಕೆಸಿಡಿ ಕವಿವಿ, ಧಾರವಾಡ.
7. ನಿರ್ದೇಶಕರು,ಕೆ.ಆರ್‌ಆಯ್/ಪ್ರಸಾರಂಗ/ಗಣಕಯಂತ್ರಘಟಕ/ಯುಎಸ್‌ಆಯ್‌ಸಿ/ಕೆಆಯ್‌ಎಮ್‌ಎಸ್/ದೈಹಿಕಶಿಕ್ಷಣ/ಐಟಿ ವಿಭಾಗ ಮುದ್ರಣಾಲಯ/ಅಂಬೇಡ್ಕರ ಅಧ್ಯಯನ, ಕವಿವಿ, ಧಾರವಾಡ.
8. ಎಲ್ಲ ಆಡಳಿತ ವಿಭಾಗಗಳ ಮುಖ್ಯಸ್ಥರುಗಳು ಕವಿವಿ, ಧಾರವಾಡ.
9. ಎಲ್ಲ ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರು ಕವಿವಿ, ಧಾರವಾಡ.
10. ಪ್ರಾಚಾರ್ಯರು ಕವಿವಿ ಪ್ರಾಥಮಿಕ/ಮಾಧ್ಯಮಿಕ ಶಾಲೆ ಕವಿವಿ, ಧಾರವಾಡ.